## ನನ್ನ ಓದು

ಇದ್ದಾಗ ಈ ಅಧಿಕಾರ ಅನೈತಿಕವಲ್ಲವೆ? ಜನರು ಅಭಿವೃದ್ಧಿ ನಿರಾಶ್ರಿತರಾಗುವುದು ಚಾರಿತ್ರಿಕ ಅನಿವಾರ್ಯತೆಯೆ? ಈ ಎಲ್ಲ ಪ್ರಶ್ನೆಗಳು ಈ ಕಾದಂಬರಿಯಲ್ಲಿ ಕೆಲವೊಮ್ಮೆ ನೇರವಾಗಿ ಕೆಲವೊಮ್ಮೆ ಸೂಕ್ಷ್ಮವಾಗಿ ಎದುರಾಗುತ್ತವೆ. ಇವುಗಳು ನಮ್ಮ ಎದುರಿಗಿನ ಪ್ರಶ್ನೆಗಳೂ ಆಗಿವೆ. ಭ್ರಷ್ಟಾಚಾರವು ಮನುಷ್ಯ ಸ್ವಭಾವದಿಂದಲೇ ಅಥವಾ ಸಾಮಾಜಿಕ ಬದಲಾವಣೆಗಳಿಂದಲೇ ಎನ್ನುವುದೂ ಈ ಪ್ರಶ್ನೆಗಳಲ್ಲಿ ಒಂದಾಗಿದೆ.

ಹಾಗೆಂದು ಈ ಕಾದಂಬರಿಯು ಒಂದು Thesis Novel ಎಂದು ನಾನು ಹೇಳುತ್ತಿಲ್ಲ. ಇದು ಅಪ್ಪಟ ಕನ್ನಡ ಕಾದಂಬರಿಯೇ. ಇದರಲ್ಲಿ ಸಾಂಕೇತಿಕತೆ, ಪ್ರಯೋಗಶೀಲತೆ, ವಿಶಿಷ್ಟವಾದ ನಿರೂಪಣೆ ಇಂಥ (ಸಾಮಾನ್ಯವಾಗಿ ನವ್ಯ ಕಾದಂಬರಿಯ ಲಕ್ಷಣಗಳು ಎಂದುಕೊಳ್ಳುತ್ತೇವೆ) ಯಾವುದೂ ಇಲ್ಲ. ಒಂದು ಕಡೆ ಕುಟುಂಬಕೇಂದ್ರಿತ (domestic) ಕಾದಂಬರಿಯ ಮಾದರಿಯನ್ನು ಬಳಸಲಾಗಿದೆ. ಎಂ.ಕೆ. ಇಂದಿರಾ, ತ.ರಾ.ಸು., ತ್ರಿವೇಣಿ ಇವರ ಉತ್ತಮ ಬರಹದ ಮಾದರಿ ಇದು. ಇದು ಮೂಲತಃ ಭಾರಂಗಿಯ ಹೆಗಡೆಯವರ ಕುಟುಂಬದ ಕಥೆ. ಬಹುಮುಖ್ಯ ಘಟನೆಗಳು ಕುಟುಂಬದ ಆವರಣದಲ್ಲಿ ನಡೆಯುತ್ತವೆ. ಈ ಕೃತಿ ಬಳಸುವ ಇನ್ನೊಂದು ಮಾದರಿಯೆಂದರೆ ಕುವೆಂಪು, ಕಾರಂತರ ಶ್ರೇಷ್ಠ ಬರಹದಲ್ಲಿ ಕಾಣುವ ಪ್ರಾದೇಶಿಕ (ಪ್ರಾಂತೀಯ) ವಾಸ್ತವವಾದ. ಇಲ್ಲಿಯ ಕೌಟುಂಬಿಕ ಹಾಗೂ ಪ್ರಾದೇಶಿಕ ವಿವರಗಳ ದಟ್ಟವಾದ ವಾಸ್ತವಿಕ ವರ್ಣನೆಗಳು ಕಾದಂಬರಿಯ ಮುಖ್ಯ ಕಾಳಜಿಗಳನ್ನು ಮರೆಸಿಬಿಡುವಷ್ಟು ಸಶಕ್ತವಾಗಿವೆ. ಇವುಗಳ ಬೆಂಬಲವಿಲ್ಲದಿದ್ದರೆ ಕಾದಂಬರಿಯು ಮರು ಹಂಬಲದ ಅಥವಾ ಸೈದ್ಧಾಂತಿಕತೆಯ ಕೃತಿಯಾಗಿಬಿಡುತ್ತಿತ್ತು.

ಕಾದಂಬರಿಯು ಭಾವುಕತೆಯ ಒಂದು ಒಳ ಹಂದರವನ್ನು ಉದ್ದಕ್ಕೂ ಬಳಸಿಕೊಳ್ಳುತ್ತದೆ. ಇಲ್ಲಿಯ ಪಾತ್ರಗಳು ಕಣ್ಣು ಒರೆಸಿಕೊಳ್ಳದ ದೃಶ್ಯಗಳೇ ಇಲ್ಲವೇನೋ! ಆದರೆ ಈ ಹಂದರದ ಮೇಲೆ ಗಾಢವಾದ ಮನುಷ್ಯ ಅನುಭವಗಳ ಗಟ್ಟಿಯಾದ ಮಂಟಪವೊಂದಿದೆ. ಹೀಗಾಗಿ ಕಾದಂಬರಿಯು ವಿಷಾದ, ದುಃಖ, ಕಳವಳ ಮುಂತಾದ ಭಾವನೆಗಳಲ್ಲಿ ನಮ್ಮನ್ನು ಅದ್ದಿಬಿಡುತ್ತದೆ. ಇತ್ತೀಚೆಗೆ ಹೀಗೆ ಮಾಡುವುದು ಕಾದಂಬರಿಯ ಪ್ರಮುಖ ಕರ್ತವ್ಯವೆಂದು ನಾನು ನಂಬಲು ತೊಡಗಿರುವುದು ವೃದ್ಧಾಪ್ಯದ ಕಾರಣದಿಂದ ಅಲ್ಲವೆಂದು ನಾನು ನಂಬಿದ್ದೇನೆ!

ಕಾದಂಬರಿಯ ಉದ್ದೇಶವೇ ಒಂದು ಕಾಲಮಾನದ ಪ್ರಾದೇಶಿಕ ಸಮಾಜವೊಂದರಲ್ಲಿ ನಡೆದ ಸ್ಥಿತ್ಯಂತರಗಳ ನಿರೂಪಣೆಯಾಗಿದೆ. ಈ ಸ್ಥಿತ್ಯಂತರಗಳನ್ನು ಅದು ಆರ್ಥಿಕ ಬದಲಾವಣೆಗಳೂ ಸೇರಿದಂಥ ಭೌತಿಕ ಬದಲಾವಣೆಗಳ ನೆಲೆಯಲ್ಲಿಯೂ ನೋಡುತ್ತದೆ. ಜೊತೆಗೆ ಮೌಲ್ಯಗಳು ಹಾಗೂ ನಡವಳಿಕೆಗಳ ನೆಲೆಯಲ್ಲಿಯೂ ನೋಡುತ್ತದೆ. ಒಂದು ಪ್ರಶ್ನೆಯೆಂದರೆ, ಇದು ಸಮಾಜದ ಎಲ್ಲಾ ಸ್ತರಗಳನ್ನು ವರ್ಗಗಳು ಜಾತಿಗಳನ್ನು ಒಳಗೊಳ್ಳುತ್ತದೆಯೆ? ಮೇಲುನೋಟಕ್ಕೆ ಹಾಗೆನಿಸಿದರೂ ಇಲ್ಲಿ ಸಮಗ್ರವಾದ ಪ್ರತಿನಿಧೀಕರಣವನ್ನು ಪಡೆಯುವುದು ಒಂದು ವರ್ಗವೇ. ಭಾರಂಗಿ ಹೆಗಡೆಯವರದು ಹವ್ಯಕ ಕುಟುಂಬ. ಸಾಕಷ್ಟು ಶ್ರೀಮಂತವೂ ಆದ ಕುಟುಂಬ. ಜೊತೆಗೆ ದತ್ತಪ್ಪ ಹೆಗಡೆಯವರಿಂದಾಗಿ ಸ್ಥಳೀಯ ಸಮುದಾಯದ ಮುಂದಾಳತ್ವವನ್ನು ವಹಿಸಿದ ಕುಟುಂಬ. ಎಲ್ಲಾ ಜಾತಿ, ಸಮುದಾಯಗಳ ಜೊತೆಗೆ ಆತ್ಮೀಯವಾದ ಸಾಮರಸ್ಯದ ಸಂಬಂಧವನ್ನು ಈ ಕುಟುಂಬ ಹೊಂದಿದೆ. ಅನೇಕ ಬಡವರಿಗೆ, ಅಸಹಾಯಕರಿಗೆ ಸಹಾಯ ಮಾಡಿದೆ. ಅವರೆಲ್ಲ ಈ ಕುಟುಂಬದ ಯಜಮಾನಿಕೆಯನ್ನು ಒಪ್ಪಿಕೊಂಡು ನಡೆದುಕೊಳ್ಳುತ್ತಾರೆ. ಇಂಥದು ಅಂದಿನ ಕಾಲಮಾನದ ಆ ಪ್ರದೇಶದ ಸಂದರ್ಭದಲ್ಲಿ ಸಹಜವಾಗಿತ್ತು. ಆದರೆ, ಕಾದಂಬರಿಯ ಒಟ್ಟಾರೆ ಭಿತ್ತಿಯಲ್ಲಿ ಈ ಜನರು ಅವಲಂಬಿತರು. ತಮ್ಮದೇ ಆದ ಸ್ವಾಯತ್ತತೆ, ಕ್ರಿಯಾಶೀಲತೆ ಇಲ್ಲದವರು. ಅವರ ಬದುಕಿನ ಬಗ್ಗೆ ಅಲ್ಲದೆ ಯೋಜನೆಯ ಕೆಲಸಕ್ಕೆ ಬರುವ ತಮಿಳು ಒಡ್ಡರ ಸ್ಥಿತಿಯ ಬಗ್ಗೆ, ಕೆಲಸಗಾರರ ಸ್ಥಿತಿಯ ಬಗ್ಗೆ ಅನುಕಂಪ ವ್ಯಕ್ತವಾಗುತ್ತದೆ. ಆದರೆ, ಅವರಿಗೆ ಚಾರಿತ್ರಿಕವಾಗಿ ಯಾವ ಪಾತ್ರವೂ ಇಲ್ಲ. ಹೀಗಾಗಿ ಕಾದಂಬರಿಯ ಸಂಘರ್ಷವು ಜನರ ಬವಣೆಗಳ ಬಗ್ಗೆ ಅಸೂಕ್ಷ್ಮವಾದ ಸರಕಾರದ ಪ್ರಭುತ್ವ ಹಾಗೂ ಅಭಿವೃದ್ಧಿಯ ಸಮರ್ಥಕರು ಒಂದು ಕಡೆಗೆ, ಅಭಿವೃದ್ಧಿಯೊಂದಿಗೆ ಸಮಾಜದ ಅವನತಿಯಾಗುತ್ತಿರುವ ಬಗ್ಗೆ ಆತಂಕಿತವಾಗಿರುವ ದತ್ತಪ್ಪ ಹೆಗಡೆಯವರಂಥ ವ್ಯಕ್ತಿಗಳು ಇನ್ನೊಂದು ಕಡೆಗೆ ಇರುವ ಸಂಘರ್ಷವಾಗಿದೆ. ಉಳಿದವರು ಅಂಚಿನಲ್ಲಿಯೇ ಉಳಿಯುತ್ತಾರೆ. ●